**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ**

**16 ಸಿ – 1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,**

**ಬೆಂಗಳೂರು – 560 052**

**ಪತ್ರಿಕಾ ಪ್ರಕಟಣೆ**

**2022-23ನೇ ಸಾಲಿನ ವಿದ್ಯುಚ್ಛಕ್ತಿ ದರ ಪರಿಷ್ಕರಣೆ**

1. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕ.ವಿ.ನಿ.ಆ)ವು ಆರ್ಥಿಕ ವರ್ಷ 2023-25ಕ್ಕೆ ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ (ಕೆ.ಪಿ.ಟಿ.ಸಿ.ಎಲ್) / ವಿದ್ಯುತ್ ಸರಬರಾಜು ಕಂಪನಿಗಳ ವಾರ್ಷಿಕ ಕಂದಾಯ ಬೇಡಿಕೆ ಮತ್ತು ಆರ್ಥಿಕ ವರ್ಷ 2023-25ಕ್ಕೆ ಕೆಪಿಟಿಸಿಎಲ್ ನ ಪ್ರಸರಣಾ ದರ ಹಾಗೂ ಆರ್ಥಿಕ ವರ್ಷ 2022-23ಕ್ಕೆ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು, ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ, ಮಂಗಳೂರು ವಿಶೇಷ ಆರ್ಥಿಕ ವಲಯ (MSEZ) (ಮಂಗಳೂರು) ಮತ್ತು ಏಕಸ್ ವಿಶೇಷ ಆರ್ಥಿಕ ವಲಯ (AEQUS SEZ) (ಬೆಳಗಾವಿ)ಗಳ ವ್ಯಾಪ್ತಿಯ ಗ್ರಾಹಕರಿಗೆ ಅನ್ವಯವಾಗುವಂತೆ ವಿದ್ಯುಚ್ಛಕ್ತಿ ಪೂರೈಕೆ ದರಗಳ ಪರಿಷ್ಕರಣೆಯನ್ನು ಅನುಮೋದಿಸಿದೆ.

   ವಿದ್ಯುತ್ ಸರಬರಾಜು ಕಂಪನಿಗಳ ಪ್ರಸ್ತಾವನೆಗಳನ್ನು ಪರಿಗಣಿಸಿ, ಆಯೋಗವು ಆರ್ಥಿಕ ವರ್ಷ 2023ಕ್ಕೆ ವಿದ್ಯುತ್ ಸರಬರಾಜು ಕಂಪನಿಗಳ 2159.00 ಕೋಟಿ ರೂಪಾಯಿಗಳ ಕಂದಾಯ ಕೊರತೆಯನ್ನು ಅನುಮೋದಿಸಿದೆ ಮತ್ತು 2159.00 ಕೋಟಿ ರೂಪಾಯಿಗಳ ಕೊರತೆಯನ್ನು ನೀಗಿಸುವ ಸಲುವಾಗಿ, ಪ್ರತಿ ಯೂನಿಟ್ ಗೆ 5 ಪೈಸೆಗಳಷ್ಟು ಇಂಧನ ಶುಲ್ಕಗಳ ಹಾಗೂ ಪ್ರತಿ ಹೆಚ್.ಪಿ/ಕಿ.ವ್ಯಾ/ಕೆ.ವಿ.ಎ.ಗೆ ರೂ.10 ರಿಂದ ರೂ 30 ರವರೆಗೆ ನಿಗದಿತ ಶುಲ್ಕಗಳ ಹೆಚ್ಚಳವನ್ನು ಅನುಮೋದಿಸಿದೆ. ಆರ್ಥಿಕ ವರ್ಷ 2023ಕ್ಕೆ ಒಟ್ಟಾರೆ ಸರಾಸರಿ ಹೆಚ್ಚಳ ಪ್ರತಿ ಯೂನಿಟ್ ಗೆ 35 ಪೈಸೆಯಷ್ಟಾಗಿರುತ್ತದೆ (ಶೇ.4.33 ಹೆಚ್ಚಳ). ವಿದ್ಯುತ್ ಸರಬರಾಜು ಕಂಪನಿಗಳು ಪ್ರಸ್ತಾವಿತ ರೂ. 11320.00 ಕೋಟಿಗಳ ಕಂದಾಯ ಕೊರತೆಗೆ ಪ್ರತಿ ಯೂನಿಟ್ ಗೆ ಸರಾಸರಿ 185 ಪೈಸೆ ಅಂದರೆ ಶೇ.23.83ರಷ್ಟು ಹೆಚ್ಚಳವನ್ನು ಕೋರಿರುತ್ತವೆ.

   **ಈ ಪರಿಷ್ಕೃತ ದರಗಳು 01.04.2022 ರಿಂದ ಬಳಕೆ ಮಾಡುವ ವಿದ್ಯುಚ್ಛಕ್ತಿಗೆ ಅನ್ವಯವಾಗುತ್ತವೆ.**

   ಆಯೋಗವು 2022-23ನೇ ಆರ್ಥಿಕ ವರ್ಷದಲ್ಲಿ ಅನುಮೋದಿಸಿದ ಪರಿಷ್ಕೃತ ದರಗಳ ವಿವರಗಳನ್ನು ಇದರೊಂದಿಗೆ ಲಗತ್ತಿಸಲಾಗಿರುತ್ತದೆ.

## 2. ವಿದ್ಯುಚ್ಛಕ್ತಿ ದರ ಏರಿಕೆಗೆ ಕಾರಣಗಳು:

ಎ. ಆರ್ಥಿಕ ವರ್ಷ 2022-23 ರಲ್ಲಿ ಉಂಟಾಗುವ ಆದಾಯ ಕೊರತೆಯ ಮೊತ್ತ ರೂ.2159.48 ಕೋಟಿಗಳನ್ನು ಮರುಪಡೆಯಲು ದರ ಹೆಚ್ಚಳ ಅವಶ್ಯಕವಾಗಿದೆ. ಸದರಿ ಮೊತ್ತವು ಆರ್ಥಿಕ ವರ್ಷ 2020-21 ರ ಕೊರತೆಯ ಮೊತ್ತ ರೂ.1700.49 ಕೋಟಿಗಳನ್ನು ಒಳಗೊಂಡಿರುತ್ತದೆ.

ಬಿ. ಆರ್ಥಿಕ ವರ್ಷ 2020-21 ರ ಆದಾಯ ಕೊರತೆ:

ಆರ್ಥಿಕ ವರ್ಷ 2020-21 ರ ಆಯವ್ಯಯ ಲೆಕ್ಕ ಪತ್ರವನ್ನು ಪರಿಶೋಧಿಸಿದಾಗ, ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಕ್ರೋಢೀಕೃತ ಆದಾಯ ಕೊರತೆಯು ರೂ.3143.16 ಕೋಟಿಗಳಾಗಿರುತ್ತದೆ. ಆರ್ಥಿಕ ವರ್ಷ 22 ಮತ್ತು 23 ರಲ್ಲಿ ಮರುಪಡೆಯಲು ಅನುಮತಿಸಲಾದ ನಿಯಂತ್ರಕ ಸ್ವತ್ತಿನ ಮೊತ್ತ ರೂ.1442.67 ಕೋಟಿಗಳಾಗಿರುತ್ತದೆ. ಸದರಿ ನಿಯಂತ್ರಕ ಸ್ವತ್ತಿನ ಮೊತ್ತವನ್ನು ಕಡಿತಗೊಳಿಸಿದ ನಂತರ, ಆರ್ಥಿಕ ವರ್ಷ 2020-21ರ ನಿವ್ವಳ ಕೊರತೆಯು ರೂ.1700.49 ಕೋಟಿಗಳಾಗಿರುತ್ತದೆ. ಸದರಿ ಮೊತ್ತವನ್ನು ಆರ್ಥಿಕ ವರ್ಷ 2022-23 ರ ವಾರ್ಷಿಕ ಕಂದಾಯ ಬೇಡಿಕೆ (ARR) ಯಲ್ಲಿ ಮರುಪಡೆಯಲು ಗಣನೆಗೆ ತೆಗೆದುಕೊಳ್ಳಲಾಗಿರುತ್ತದೆ.

- ಕೋವಿಡ್ -19 ಸಾಂಕ್ರಾಮಿಕ ರೋಗ ಹಾಗೂ ಇತರೆ ಕಾರಣಗಳಿಂದಾಗಿ ಆಯೋಗವು ಆರ್ಥಿಕ ವರ್ಷ 2021 ರ ದರ ಪರಿಷ್ಕರಣೆ ಆದೇಶವನ್ನು ದಿನಾಂಕ 04.11.2020 ರಂದು ಜಾರಿಗೊಳಿಸಿರುತ್ತದೆ. ಗ್ರಾಹಕರಿಗೆ ವಿದ್ಯುತ್ ದರ ಹೆಚ್ಚಳದ ಹೊರೆಯನ್ನು ತಪ್ಪಿಸಲು ಆಯೋಗವು ರೂ. 1442.70 ಕೋಟಿಗಳ ನಿಯಂತ್ರಕ ಸ್ವತ್ತನ್ನು ರಚಿಸಿ, ಪರಿಷ್ಕೃತ ದರವನ್ನು ದಿನಾಂಕ 01.11.2020 ರಿಂದ ಅನ್ವಯಗೊಳಿಸಿರುತ್ತದೆ.

- ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ಆರ್ಥಿಕ ವರ್ಷ 2021 ರಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ವಿದ್ಯುಚ್ಛಕ್ತಿಯ ಮಾರಾಟವು 7228.65MU ಗಳಷ್ಟು ಗಣನೀಯವಾಗಿ ಇಳಿಕೆಯಾಗಿರುತ್ತದೆ. ಇದರ ಪರಿಣಾಮವಾಗಿ ಅನುಮೋದಿಸಿದ್ದ ಮೊತ್ತಕ್ಕಿಂತ ರೂ.6182.84 ಕೋಟಿಗಳಷ್ಟು ಆದಾಯದ ಕೊರತೆಯುಂಟಾಗಿರುತ್ತದೆ. ಆರ್ಥಿಕ ವರ್ಷ 2021ರಲ್ಲಿ ವಿದ್ಯುಚ್ಛಕ್ತಿ ಉಪಯೋಗಿಸದಿದ್ದರೂ, ಶಾಖೋತ್ಪನ್ನ ಕೇಂದ್ರಗಳಿಗೆ ನಿಗದಿತ ಶುಲ್ಕ ಪಾವತಿಯಿಂದಾಗಿ ಸಹಾ ಪ್ರತಿ ಯೂನಿಟ್ ವಿದ್ಯುತ್ ಖರೀದಿ ವೆಚ್ಚವು 31 ಪೈಸೆಗಳಷ್ಟು ಹೆಚ್ಚಾಗಿದೆ.

- ಆರ್ಥಿಕ ವರ್ಷ 21ರ ಆದಾಯ ಕೊರತೆಯು ಪ್ರತಿ ಯೂನಿಟ್‌ಗೆ 27 ಪೈಸೆಯಷ್ಟು ದರ ಹೆಚ್ಚಳಕ್ಕೆ ಕಾರಣವಾಗಿರುತ್ತದೆ.

- ಆರ್ಥಿಕ ವರ್ಷ 2023ರಲ್ಲಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳ ವಿದ್ಯುತ್ ಖರೀದಿಯ ವೆಚ್ಚ, ಕಾರ್ಯ ಮತ್ತು ನಿರ್ವಹಣೆ ವೆಚ್ಚ ಹಾಗೂ ಪಡೆಯುವ ಸಾಲಗಳು ಉಳಿದ ಹೆಚ್ಚಳಕ್ಕೆ (ಪ್ರತಿ ಯೂನಿಟ್‌ಗೆ 8 ಪೈಸೆ) ಕಾರಣವಾಗಿರುತ್ತದೆ.

**ಸಮಾಜದ ಮೂಲಭೂತ ಅಗತ್ಯವಾಗಿರುವ ವಿದ್ಯುತ್ ಪೂರೈಕೆಯ ವ್ಯವಹಾರವನ್ನು ವಿದ್ಯುತ್ ಸರಬರಾಜು ಕಂಪನಿಗಳು ಸುಲಲಿತವಾಗಿ ನಡೆಸಲು ಅನುವು ಮಾಡಿಕೊಡುವ ಸಲುವಾಗಿ, ವಿದ್ಯುತ್ ಪೂರೈಕೆ ದರದ ಹೆಚ್ಚಳ ಅನಿವಾರ್ಯವಾಗಿದೆ.**

**3. ವಿದ್ಯುತ್ ಸರಬರಾಜು ಕಂಪನಿಗಳ ಪ್ರಸ್ತಾವನೆ:**

ಎಲ್ಲಾ ವರ್ಗದ ಗ್ರಾಹಕರಿಗೆ ಸಂಬಂಧಿಸಿದಂತೆ, ವಿದ್ಯುತ್ ಸರಬರಾಜು ಕಂಪನಿಗಳು ಪ್ರತಿ ಯೂನಿಟ್‌ಗೆ 132 ಪೈಸೆಗಳಿಂದ 236 ಪೈಸೆಗಳವರೆಗೆ ದರ ಹೆಚ್ಚಳವನ್ನು ಈ ಕೆಳಗಿನಂತೆ ಕೋರಿರುತ್ತವೆ.

| ವಿದ್ಯುತ್ ಸರಬರಾಜು ಕಂಪನಿ | ಪ್ರತಿ ಯೂನಿಟ್ ಗೆ ಪ್ರಸ್ತಾವಿತ ಏರಿಕೆ, ಪೈಸೆಗಳಲ್ಲಿ | ಶೇಕಡಾ ಏರಿಕೆ |
|---|---|---|
| ಬೆ.ವಿ.ಸ.ಕಂ | 158 | 19.68 |
| ಮ.ವಿ.ಸ.ಕಂ | 132 | 17.60 |
| ಚಾ.ವಿ.ಸ.ನಿ.ನಿ | 227 | 30.45 |
| ಹು.ವಿ.ಸ.ಕಂ | 217 | 29.33 |
| ಗು.ವಿ.ಸ.ಕಂ | 236 | 30.52 |
| **ಒಟ್ಟು** | **185** | **23.83** |

**4. ಏಕರೂಪದ ದರ ಹೆಚ್ಚಳ:**

ರಾಜ್ಯದಲ್ಲಿ ಇದುವರೆವಿಗೂ ಏಕರೂಪದ ವಿದ್ಯುಚ್ಛಕ್ತಿ ದರಗಳು ರೂಢಿಯಲ್ಲಿರುವುದರಿಂದ, ಆಯೋಗವು ಬೆ.ವಿ.ಸ.ಕಂ ವ್ಯಾಪ್ತಿಯಲ್ಲಿ ಕನಿಷ್ಠ ವ್ಯತ್ಯಾಸದ ಹೆಚ್ಚಳದೊಂದಿಗೆ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಿಗೆ ಹಾಗೂ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘಕ್ಕೆ ಏಕರೂಪದ ದರ ಏರಿಕೆಯನ್ನು ಅನುಮೋದಿಸಿದೆ. ವಿದ್ಯುತ್ ವಾಹನಗಳ ಬ್ಯಾಟರಿ ಚಾರ್ಜಿಂಗ್ / ವಿನಿಮಯ ಕೇಂದ್ರಗಳನ್ನು ಹೊರತುಪಡಿಸಿ, ಅವುಗಳಿಗೆ ಅಸ್ತಿತ್ವದಲ್ಲಿರುವ ದರ ಮುಂದುವರೆಸುತ್ತಾ, ಎಲ್ಲಾ ಪ್ರವರ್ಗಗಳ ವಿವಿಧ ಹಂತಗಳಲ್ಲಿನ ವಿದ್ಯುತ್ ದರ ಪ್ರತಿ ಯೂನಿಟ್ ಗೆ 5 ಪೈಸೆ ಹೆಚ್ಚಳವಾಗಿದ್ದು, ನಿಗದಿತ ಶುಲ್ಕದಲ್ಲಿ ಪ್ರತಿ ಕಿ.ವ್ಯಾ/ಕೆ.ವಿ.ಎಗೆ ರೂ.10 ರಿಂದ ರೂ.30 ರವರೆಗೆ ಹೆಚ್ಚಳವಾಗಿರುತ್ತದೆ.

**5. ಹೊಸ ದರ ಆದೇಶದ ಪ್ರಮುಖ ಅಂಶಗಳು:**

- **ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ರಿಯಾಯಿತಿ:**

ಸೂಕ್ಷ್ಮ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು (ಸರ್ಕಾರದಿಂದ ಮಾನ್ಯತೆ ಪಡೆದ) ಕೋವಿಡ್ - 19 ರ ದುಷ್ಪರಿಣಾಮಗಳಿಂದ ಚೇತರಿಸಿಕೊಳ್ಳಲು, ಆಯೋಗವು ಒಂದು ವರ್ಷದವರೆಗೆ ಮಾಸಿಕ ಇಂಧನ ಬಳಕೆಯಲ್ಲಿ ಪ್ರತಿ ಯೂನಿಟ್‌ಗೆ 50 ಪೈಸೆ ರಿಯಾಯಿತಿಯನ್ನು ನೀಡಲು ನಿರ್ಧರಿಸಿದೆ;

- **ಋತುಕಾಲಿಕ ಕೈಗಾರಿಕೆಗಳಿಗೆ ರಿಯಾಯಿತಿಗಳು- ಮಂಜುಗಡ್ಡೆ ಉತ್ಪಾದನಾ ಘಟಕಗಳು ಹಾಗೂ ಶೀತಲೀಕರಣ ಘಟಕಗಳು:**

  ಕರ್ನಾಟಕ ರಾಜ್ಯದ ಕರಾವಳಿ ಪ್ರದೇಶದಲ್ಲಿ ಸಮುದ್ರದಿಂದ 5 ಕಿಮೀ ವ್ಯಾಪ್ತಿಯೊಳಗೆ ಮೀನು ಸಂರಕ್ಷಣೆ ಉದ್ದೇಶಕ್ಕಾಗಿ ಬಳಸಲಾಗುವ ಮಂಜುಗಡ್ಡೆ ಉತ್ಪಾದನಾ ಘಟಕಗಳು ಹಾಗೂ ಶೀತಲೀಕರಣ ಘಟಕಗಳಿಗೆ ಸಂಬಂಧಿಸಿದಂತೆ, ಬೇಡಿಕೆಯ ಶುಲ್ಕಗಳು ತಿಂಗಳಲ್ಲಿ ದಾಖಲಾದ ಗರಿಷ್ಠ ಬೇಡಿಕೆ ಅಥವಾ ಒಪ್ಪಂದದ ಬೇಡಿಕೆಯ ಶೇಕಡಾ 85 ರಲ್ಲಿ ಯಾವುದು ಅಧಿಕವೋ ಅದರ ಶೇ.50 ರಷ್ಟು ನಿಗದಿಪಡಿಸಿದ ಸಾಮಾನ್ಯ ಬೇಡಿಕೆ ಶುಲ್ಕ ಮತ್ತು ಬಳಸಿದ ಯೂನಿಟ್ ಗಳಿಗೆ ನಿಗದಿಪಡಿಸಿದ ಇಂಧನ ಶುಲ್ಕ. **ಇದರೊಂದಿಗೆ, ವರ್ಷದಲ್ಲಿ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್ ಗೆ ರೂ. 1/- ರಷ್ಟು ರಿಯಾಯಿತಿಯನ್ನು ಅನುಮತಿಸಲಾಗಿದೆ.**

- **ಮಳೆಗಾಲ (ಮಾನ್ಸೂನ್) ತಿಂಗಳುಗಳ ಸಂಜೆಯ ಸಮಯದಲ್ಲಿ ಸಮಯಾಧಾರಿತ ವಿದ್ಯುತ್ ದರ (ToD) ದಲ್ಲಿ ಸಡಿಲಿಕೆ ಮುಂದುವರಿಸಲಾಗಿದೆ:**

  ಜುಲೈನಿಂದ ನವೆಂಬರ್ ವರೆಗಿನ ಮಾನ್ಸೂನ್ ತಿಂಗಳುಗಳಲ್ಲಿ 18.00 ಘಂಟೆಗಳಿಂದ 22.00 ಘಂಟೆಗಳವರೆಗೆ ವಿದ್ಯುತ್ ಬಳಕೆಗಾಗಿ ಸಂಜೆಯ ಗರಿಷ್ಠ ToD ದರದ ಸಡಿಲಿಕೆಯನ್ನು ಮುಂದುವರಿಸಲಾಗಿದೆ. ಆದಾಗ್ಯೂ, ಡಿಸೆಂಬರ್‌ನಿಂದ ಜೂನ್‌ವರೆಗಿನ ಮಾನ್ಸೂನ್ ಅಲ್ಲದ ತಿಂಗಳುಗಳಲ್ಲಿ 18.00 ಘಂಟೆಗಳಿಂದ 22.00 ಘಂಟೆಗಳವರೆಗಿನ ವಿದ್ಯುತ್ ಬಳಕೆಗಾಗಿ ToD ದರ ಮುಂದುವರಿಯುತ್ತದೆ.

- **ರಿಯಾಯಿತಿ ಇಂಧನ ದರ ಯೋಜನೆ:**

  ವರ್ಷದಲ್ಲಿ ಹೆಚ್ಚುವರಿ ವಿದ್ಯುತ್ ಮಾರಾಟವನ್ನು ಉತ್ತೇಜಿಸಲು, ಆಯೋಗವು HT2(a), (b) ಮತ್ತು (c) ಪ್ರವರ್ಗಗಳಿಗೆ ಆರ್ಥಿಕ ವರ್ಷ 2023ರ ಮೂಲ ಬಳಕೆಗಿಂತ ಹೆಚ್ಚಿನ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6 ರಂತೆ "**ರಿಯಾಯಿತಿ ಇಂಧನ ದರ ಯೋಜನೆಯನ್ನು**" ಮುಂದುವರೆಸಿದೆ.

- **ಹೆಚ್.ಟಿ ಗ್ರಾಹಕರಿಗೆ ವಿಶೇಷ ಪ್ರೋತ್ಸಾಹ ಯೋಜನೆ (Special Incentive Scheme):**

  ಆಯೋಗವು 2018 ರ ದರ ಆದೇಶದಲ್ಲಿ ಎಲ್ಲಾ ಹೆಚ್.ಟಿ. ಗ್ರಾಹಕರಿಗಾಗಿ ಜಾರಿಗೊಳಿಸಿದ್ದ ವಿಶೇಷ ಪ್ರೋತ್ಸಾಹ ಯೋಜನೆಯನ್ನು ಪ್ರಸ್ತುತ ಇರುವ ನಿಬಂಧನೆ ಮತ್ತು ಷರತ್ತುಗಳೊಂದಿಗೆ ಆರ್ಥಿಕ ವರ್ಷ 2022-23ಕ್ಕೆ 10.00 ಘಂಟೆಯಿಂದ 18.00 ಘಂಟೆಯ ಸಮಯದಲ್ಲಿನ ವಿದ್ಯುಚ್ಛಕ್ತಿ ಬಳಕೆಗಾಗಿ, ಸ್ಥಾವರಗಳ ಮೂಲ ಬಳಕೆಗಿಂತ ಹೆಚ್ಚಿನ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.1 ರ ಪ್ರೋತ್ಸಾಹಧನವನ್ನು ಮುಂದುವರೆಸಿದೆ. ಮುಂದುವರೆದು, ರಾತ್ರಿ 22.00 ಘಂಟೆಯಿಂದ 6.00 ಘಂಟೆಗಳವರೆಗೆ ಬಳಸುವ ಎಲ್ಲಾ ಯೂನಿಟ್ ಗಳಿಗೆ ಪ್ರತಿ

ಯೂನಿಟ್‌ಗೆ ರೂ.2ರ ಪ್ರೋತ್ಸಾಹಧನವನ್ನು ಅನುಮತಿಸಿದೆ. ಆರ್ಥಿಕ ವರ್ಷ 2023ರ ಅಕಾಲಿಕ ಅವಧಿಯ (Non-monsoon) ತಿಂಗಳುಗಳಲ್ಲಿ ಸಂಜೆಯ ಗರಿಷ್ಠ ಅವಧಿ 18.00 ಘಂಟೆಯಿಂದ 22.00 ಘಂಟೆವರೆಗಿನ ಸಮಯದಲ್ಲಿ ಬಳಸುವ ವಿದ್ಯುಚ್ಛಕ್ತಿಗೆ, ಪ್ರತಿ ಯೂನಿಟ್‌ಗೆ ರೂ.1 ದಂಡ ಶುಲ್ಕವನ್ನು ವಿಧಿಸಲಾಗುವುದು.

- **ವಿದ್ಯುತ್ ವಾಹನಗಳ (EV)** ಬಳಕೆಯನ್ನು ಉತ್ತೇಜಿಸುವ ಸಲುವಾಗಿ, ಆರ್ಥಿಕ ವರ್ಷ 2022-23ರಲ್ಲಿ ಬ್ಯಾಟರಿ ಚಾರ್ಜಿಂಗ್ / ವಿನಿಮಯ ಕೇಂದ್ರಗಳಿಗೆ ಹಾಲಿ ದರವನ್ನು ಯಾವುದೇ ಹೆಚ್ಚಳವಿಲ್ಲದೆ ಮುಂದುವರಿಸಲಾಗಿದೆ**.**

- **ಹಸಿರು ದರ (Green Tariff):**
  ಆಯೋಗವು ನವೀಕರಿಸಬಹುದಾದ ಮೂಲಗಳಿಂದ ವಿದ್ಯುತ್ ಖರೀದಿ ಮತ್ತು ಬಳಕೆಯನ್ನು ಉತ್ತೇಜಿಸುವುದನ್ನು ಮುಂದುವರೆಸಿದೆ. ವಿದ್ಯುತ್ ಸರಬರಾಜು ಕಂಪನಿಗಳಿಂದ ನವೀಕರಿಸಬಹುದಾದ ಇಂಧನ ಖರೀದಿಯನ್ನು ಉತ್ತೇಜಿಸಲು ಹೆಚ್.ಟಿ ಕೈಗಾರಿಕೆಗಳು ಮತ್ತು ಹೆಚ್.ಟಿ ವಾಣಿಜ್ಯ ಗ್ರಾಹಕರಿಗೆ ಅವರ ಆಯ್ಕೆಯಂತೆ, ಅನ್ವಯವಾಗುವ ವಿದ್ಯುತ್ ದರಕ್ಕಿಂತ ಪ್ರತಿ ಯೂನಿಟ್‌ಗೆ 50 ಪೈಸೆಯಷ್ಟು ಹೆಚ್ಚಿನ ಹಸಿರು ದರವನ್ನು ಮುಂದುವರಿಸಲಾಗಿದೆ.

## 6. ಸರ್ಕಾರದ ಸಹಾಯಧನ:

- 10 ಎಚ್‌ಪಿವರೆಗೆ ಮತ್ತು ಒಳಗೊಂಡಂತೆ 33.15 ಲಕ್ಷ ನೀರಾವರಿ ಪಂಪ್ ಸೆಟ್‌ಗಳಿಗೆ ಉಚಿತ ವಿದ್ಯುತ್ ಸರಬರಾಜಿಗೆ ಸರ್ಕಾರದಿಂದ ವಿದ್ಯುತ್ ಸರಬರಾಜು ಕಂಪನಿಗಳು ಮತ್ತು ಹುಕ್ಕೇರಿ ಆರ್‌ಇಸಿಎಸ್‌ಗೆ ಪಾವತಿಸಬೇಕಾದ ಸಹಾಯಧನವು, ಆರ್ಥಿಕ ವರ್ಷ 22ಕ್ಕೆ ರೂ. 12267.58 ಕೋಟಿಗಳಿಗೆ ಪ್ರತಿಯಾಗಿ ಆರ್ಥಿಕ ವರ್ಷ 23ಕ್ಕೆ ರೂ. 13019 ಕೋಟಿಗಳೆಂದು ಅಂದಾಜಿಸಲಾಗಿದೆ.
- 26.39 ಲಕ್ಷ ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಸ್ಥಾವರಗಳಿಗೆ ಸಹಾಯಧನವು ಆರ್ಥಿಕ ವರ್ಷ 22ಕ್ಕೆ ರೂ.567.13 ಕೋಟಿಗಳಿಗೆ ಪ್ರತಿಯಾಗಿ ಆರ್ಥಿಕ ವರ್ಷ 23ಕ್ಕೆ ರೂ.618.04 ಕೋಟಿಗಳಾಗಿರುತ್ತದೆ.

## 7. ವಿದ್ಯುತ್ ಸರಬರಾಜು ಕಂಪನಿಗಳ 2022-23 ನೇ ಸಾಲಿನ ವಾರ್ಷಿಕ ಕಂದಾಯ ಬೇಡಿಕೆ (ARR):

ಆಯೋಗವು, ಬಹು ವಾರ್ಷಿಕ ದರ ವಿನಿಯಮಗಳಡಿ ಒಳಗೊಂಡ ತತ್ವಗಳ ಪ್ರಕಾರ ಆರ್ಥಿಕ ವರ್ಷ 2023-25 ಕ್ಕೆ ಪರಿಷ್ಕೃತ ವಾರ್ಷಿಕ ಕಂದಾಯ ಬೇಡಿಕೆಯನ್ನು ನಿಗದಿಪಡಿಸಿರುತ್ತದೆ. ಆಯೋಗವು ಎಲ್ಲಾ ಪರವಾನಿಗೆದಾರರ ಆರ್ಥಿಕ ವರ್ಷ 2021 ರ ವಾರ್ಷಿಕ ಕಾರ್ಯ

ನಿರ್ವಹಣೆಯನ್ನು ಪುನರ್ಮನನ ಮಾಡಿದ್ದು, ಸದರಿ ವರ್ಷದ ಕೊರತೆಯನ್ನು, ಆರ್ಥಿಕ ವರ್ಷ 2023 ರ ವಾರ್ಷಿಕ ಕಂದಾಯ ಬೇಡಿಕೆಯಲ್ಲಿ ಪರಿಗಣಿಸಿರುತ್ತದೆ.

ಆರ್ಥಿಕ ವರ್ಷ 2023 ಕ್ಕೆ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಅನುಮೋದಿತ ವಾರ್ಷಿಕ ಕಂದಾಯ ಬೇಡಿಕೆ, ವಿದ್ಯುತ್ ಮಾರಾಟ ಮತ್ತು ವಿದ್ಯುತ್ ಖರೀದಿ ಪ್ರಮಾಣಗಳ ಸಾರಾಂಶವು ಈ ಕೆಳಕಂಡಂತೆ ಇರುತ್ತದೆ:

| ಕ್ರ. ಸಂ. | ವಿವರಗಳು | ಆ.ವ23 | ಆ.ವ24 | ಆ.ವ25 |
|---|---|---|---|---|
| 1 | ಆಯೋಗವು ಅನುಮೋದಿಸಿದ ವಾರ್ಷಿಕ ಕಂದಾಯ ಬೇಡಿಕೆ ಕೋಟಿ ರೂ. ಗಳಲ್ಲಿ(ಎಲ್ಲಾ ವಿ.ಸ.ಕಂ ಗಳಿಗೆ) | 52,023.43 | 51,919.59 | 54,453.76 |
| 2 | ವಿದ್ಯುತ್ ಖರೀದಿ ಪ್ರಮಾಣ, ದಶ ಲಕ್ಷ ಯೂನಿಟ್ ಗಳಲ್ಲಿ (ಜನರೇಟರ್ ಬಸ್ ನಲ್ಲಿ) | 71,645.87 | 73,740.45 | 75,961.32 |
| 3 | ಅನುಮೋದಿಸಿದ ಶೇ. ಪ್ರಸರಣಾ ನಷ್ಟ | 2.864 | 2.764 | 2.664 |
| 4 | ಅನುಮೋದಿಸಿದ ಶೇ. ವಿತರಣಾ ನಷ್ಟ (ಎಲ್ಲಾ ವಿ.ಸ.ಕಂ ಗಳಿಗೆ) | 10.84 | 10.48 | 10.10 |
| 5 | ಅನುಮೋದಿಸಿದ ಒಟ್ಟು ಶೇ. ಪ್ರಸರಣಾ ಮತ್ತು ವಿತರಣಾ ನಷ್ಟ | 13.88 | 13.43 | 12.98 |
| 6 | ಪ್ರಸರಣಾ ಮತ್ತು ವಿತರಣಾ ನಷ್ಟ ಹೊರತುಪಡಿಸಿ ಅನುಮೋದಿಸಿದ ವಿದ್ಯುತ್ ಮಾರಾಟ ಪ್ರಮಾಣ (ವಿದ್ಯುತ್ ಸರಬರಾಜು ಕಂಪನಿಗಳು) ದಶ ಲಕ್ಷ ಯೂನಿಟ್‌ಗಳಲ್ಲಿ | 61,699.38 | 63,877.27 | 66,098.99 |

**8. ಆರ್ಥಿಕ ವರ್ಷ 2023-25ಕ್ಕೆ ವಿದ್ಯುತ್ ಸರಬರಾಜು ಕಂಪನಿವಾರು, ಪ್ರಸ್ತಾವಿತ ಮತ್ತು ಅನುಮೋದಿತ ವಾರ್ಷಿಕ ಕಂದಾಯ ಬೇಡಿಕೆ:**

(ರೂ. ಕೋಟಿಗಳಲ್ಲಿ)

| ವಿದ್ಯುತ್ ಸರಬರಾಜು ಕಂಪನಿ | ಆ.ವ23 | | ಆ.ವ24 | | ಆ.ವ25 | |
|---|---|---|---|---|---|---|
| | ಪ್ರಸ್ತಾವಿತ | ಅನುಮೋದಿಸಿದ | ಪ್ರಸ್ತಾವಿತ | ಅನುಮೋದಿಸಿದ | ಪ್ರಸ್ತಾವಿತ | ಅನುಮೋದಿಸಿದ |
| ಬೆ.ವಿ.ಸ.ಕಂ | 28,027.81 | 25,574.78 | 26,959.45 | 25,786.12 | 28,179.43 | 27,042.72 |
| ಮ.ವಿ.ಸ.ಕಂ | 4,799.93 | 4,378.05 | 4,528.31 | 4,165.08 | 4,768.29 | 4,361.30 |
| ಚಾ.ವಿ.ಸ.ನಿ.ನಿ | 6,612.81 | 5,603.94 | 6,068.37 | 5,559.83 | 6,472.06 | 5,826.87 |
| ಹು.ವಿ.ಸ.ಕಂ | 11,601.56 | 10,040.21 | 10,113.80 | 9,950.05 | 10,709.15 | 10,439.90 |
| ಗು.ವಿ.ಸ.ಕಂ | 7,771.08 | 6,426.46 | 6,647.19 | 6,458.52 | 6,872.51 | 6,782.993 |
| **ಒಟ್ಟು** | **58,813.19** | **52,023.44** | **54,317.12** | **51,919.50** | **57,001.44** | **54,453.78** |

**9. ಆರ್ಥಿಕ ವರ್ಷ 2023-25 ಕ್ಕೆ ಕೆ.ಪಿ.ಟಿ.ಸಿ.ಎಲ್ ನ ವಿದ್ಯುತ್ ಪ್ರಸರಣಾ ದರ:**

ಆಯೋಗವು ಆರ್ಥಿಕ ವರ್ಷ 2023 ರಿಂದ ಆರ್ಥಿಕ ವರ್ಷ 2025 ರವರೆಗೆ ಅನುಕ್ರಮವಾಗಿ ರೂ.5093.77 ಕೋಟಿಗಳು, ರೂ.5415.75 ಕೋಟಿಗಳು ಮತ್ತು ರೂ.5803.79 ಕೋಟಿಗಳ ಕೆ.ಪಿ.ಟಿ.ಸಿ.ಎಲ್. ನ ವಾರ್ಷಿಕ ಕಂದಾಯ ಬೇಡಿಕೆಯನ್ನು ನಿರ್ಧರಿಸಿದೆ. ವಿದ್ಯುತ್ ಸರಬರಾಜು ಕಂಪನಿಗಳು ನಿಯಂತ್ರಣಾ ಅವಧಿಯಲ್ಲಿ ಕೆ.ಪಿ.ಟಿ.ಸಿ.ಎಲ್ ಗೆ ಪಾವತಿಸಬೇಕಾದ ಅನುಮೋದಿತ ಪ್ರಸರಣಾ ದರಗಳು ಈ ಕೆಳಗಿನಂತಿವೆ:

| ವರ್ಷ | ಹಂಚಿಕೆಯಾದ ಸಾಮರ್ಥ್ಯ (ಮೆ.ವ್ಯಾ) | ಪ್ರಸರಣಾ ದರ ರೂ ಗಳಲ್ಲಿ (ಮೆ.ವ್ಯಾ/ಪ್ರತಿ ತಿಂಗಳು) | ಪ್ರಸರಣಾ ದರ ರೂ. ಕೋಟಿ ಗಳಲ್ಲಿ ಪ್ರತಿ ವರ್ಷಕ್ಕೆ |
|---|---|---|---|
| ಆ.ವ 23 | 25,053 | 1,69,433 | 5,093.77 |
| ಆ.ವ 24 | 26,103 | 1,72,897 | 5,415.74 |
| ಆ.ವ 25 | 27,203 | 1,77,793 | 5,803.79 |

10. **ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ (HRECS) ಕ್ಕೆ ಆರ್ಥಿಕ ವರ್ಷ 2023-25ಕ್ಕೆ ವಾರ್ಷಿಕ ಕಂದಾಯ ಬೇಡಿಕೆ ಮತ್ತು ಆರ್ಥಿಕ ವರ್ಷ 2023ಕ್ಕೆ ವಿದ್ಯುಚ್ಛಕ್ತಿ ದರ ನಿರ್ಧರಣೆ:**
   ಆಯೋಗವು, ಆರ್ಥಿಕ ವರ್ಷ 2023-25 ಕ್ಕೆ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘಕ್ಕೆ ಅನುಕ್ರಮವಾಗಿ ರೂ.173.60 ಕೋಟಿಗಳು, ರೂ.186.32 ಕೋಟಿಗಳು ಮತ್ತು ರೂ.193.24 ಕೋಟಿಗಳ ವಾರ್ಷಿಕ ಕಂದಾಯ ಬೇಡಿಕೆಯನ್ನು ನಿರ್ಧರಿಸಿದೆ.

11. **ಮಂಗಳೂರು ವಿಶೇಷ ಆರ್ಥಿಕ ವಲಯ (MSEZL) ಕ್ಕೆ ಆರ್ಥಿಕ ವರ್ಷ 2023-25ಕ್ಕೆ ವಾರ್ಷಿಕ ಕಂದಾಯ ಬೇಡಿಕೆ ಮತ್ತು ಆರ್ಥಿಕ ವರ್ಷ 2023ಕ್ಕೆ ವಿದ್ಯುಚ್ಛಕ್ತಿ ದರ ನಿರ್ಧರಣೆ:**
   ಆಯೋಗವು, ಆರ್ಥಿಕ ವರ್ಷ 2023-25ಕ್ಕೆ ಮಂಗಳೂರು ವಿಶೇಷ ಆರ್ಥಿಕ ವಲಯಕ್ಕೆ ಅನುಕ್ರಮವಾಗಿ ರೂ.54.18 ಕೋಟಿಗಳು, ರೂ.54.38 ಕೋಟಿಗಳು ಮತ್ತು ರೂ.56.05 ಕೋಟಿಗಳ ವಾರ್ಷಿಕ ಕಂದಾಯ ಬೇಡಿಕೆಯನ್ನು ನಿರ್ಧರಿಸಿದೆ. ಆರ್ಥಿಕ ವರ್ಷ 23ಕ್ಕೆ MSEZL ಗೆ ಅನುಮೋದಿಸಿದ ವಿದ್ಯುತ್ ದರಗಳು ಈ ಕೆಳಗಿನಂತಿವೆ:

| ಪ್ರವರ್ಗ | ಬೇಡಿಕೆ ಶುಲ್ಕ | ಇಂಧನ ಶುಲ್ಕ |
|---|---|---|
| ಹೆಚ್.ಟಿ ಕೈಗಾರಿಕೆಗಳು | ರೂ. 220 /ಕೆ.ವಿ.ಎ/ ಪ್ರತಿ ತಿಂಗಳಿಗೆ | ಪ್ರತಿ ಯೂನಿಟ್ ಗೆ ರೂ.7.00 |
| ಹೆಚ್.ಟಿ ತಾತ್ಕಾಲಿಕ / ನಿರ್ಮಾಣ | ರೂ. 260 /ಕೆ.ವಿ.ಎ/ ಪ್ರತಿ ತಿಂಗಳಿಗೆ | ಪ್ರತಿ ಯೂನಿಟ್ ಗೆ ರೂ.11.00 |
| ಎಲ್.ಟಿ ಕೈಗಾರಿಕೆಗಳು | ರೂ. 200 /ಕಿ.ವ್ಯಾ/ ಪ್ರತಿ ತಿಂಗಳಿಗೆ | ಪ್ರತಿ ಯೂನಿಟ್ ಗೆ ರೂ.6.50 |
| ಎಲ್.ಟಿ ತಾತ್ಕಾಲಿಕ / ನಿರ್ಮಾಣ | ರೂ. 250 / ಕಿ.ವ್ಯಾ / ಪ್ರತಿ ತಿಂಗಳಿಗೆ | ಪ್ರತಿ ಯೂನಿಟ್ ಗೆ ರೂ.11.00 |

12. **ಏಕಸ್ ವಿಶೇಷ ಆರ್ಥಿಕ ವಲಯ (AEQUS SEZ) ಕ್ಕೆ ಆರ್ಥಿಕ ವರ್ಷ 2023-25ಕ್ಕೆ ವಾರ್ಷಿಕ ಕಂದಾಯ ಬೇಡಿಕೆ ಮತ್ತು ಆರ್ಥಿಕ ವರ್ಷ 2023ಕ್ಕೆ ವಿದ್ಯುಚ್ಛಕ್ತಿ ದರ ನಿರ್ಧರಣೆ:**
   ಆಯೋಗವು, ಆರ್ಥಿಕ ವರ್ಷ 2023-25ಕ್ಕೆ ಏಕಸ್ ವಿಶೇಷ ಆರ್ಥಿಕ ವಲಯಕ್ಕೆ ಅನುಕ್ರಮವಾಗಿ ರೂ.20.43 ಕೋಟಿಗಳು, ರೂ.20.78 ಕೋಟಿಗಳು ಮತ್ತು ರೂ.23.13 ಕೋಟಿಗಳ ವಾರ್ಷಿಕ ಕಂದಾಯ ಬೇಡಿಕೆಯನ್ನು ನಿರ್ಧರಿಸಿದೆ. ಆ.ವ 23ಕ್ಕೆ **AEQUS SEZ** ಗೆ ಅನುಮೋದಿಸಿದ ವಿದ್ಯುತ್ ದರಗಳು ಈ ಕೆಳಗಿನಂತಿವೆ:

| ಪ್ರವರ್ಗ | ಬೇಡಿಕೆ ಶುಲ್ಕ | ಇಂಧನ ಶುಲ್ಕ |
|---|---|---|
| ಹೆಚ್.ಟಿ ಕೈಗಾರಿಕೆಗಳು (ಸಾಮಾನ್ಯ ಸೌಕರ್ಯಗಳು) | ರೂ. 240 /ಕೆ.ವಿ.ಎ/ ಪ್ರತಿ ತಿಂಗಳಿಗೆ | ಪ್ರತಿ ಯೂನಿಟ್ ಗೆ ರೂ.7.10 |
| ಹೆಚ್.ಟಿ ನಿರ್ಮಾಣ / ತಾತ್ಕಾಲಿಕ | ರೂ. 275 /ಕೆ.ವಿ.ಎ/ ಪ್ರತಿ ತಿಂಗಳಿಗೆ | ಪ್ರತಿ ಯೂನಿಟ್ ಗೆ ರೂ.11.00 |
| ಎಲ್.ಟಿ ಸಾಮಾನ್ಯ ಸೌಕರ್ಯಗಳು | ರೂ. 240 /ಕಿ.ವ್ಯಾ/ ಪ್ರತಿ ತಿಂಗಳಿಗೆ | ಪ್ರತಿ ಯೂನಿಟ್ ಗೆ ರೂ.7.20 |

***ಟಿಪ್ಪಣಿ:* ಪ್ರತಿ ಬಳಕೆದಾರರ ಪ್ರವರ್ಗಕ್ಕೆ ಸಂಬಂಧಿಸಿದ ಪರಿಷ್ಕೃತ ವಿದ್ಯುತ್‌ದರ ವಿವರಗಳನ್ನು ಲಗತ್ತಿಸಿದೆ.**

***ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತ, ವಿದ್ಯುತ್ ಸರಬರಾಜು ಕಂಪನಿಗಳು, ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ, ಮಂಗಳೂರು ವಿಶೇಷ ಆರ್ಥಿಕ ವಲಯ (MSEZ) ಮತ್ತು ಏಕಸ್ ವಿಶೇಷ ಆರ್ಥಿಕ ವಲಯ (AEQUZ SEZ) ಗಳಿಗೆ ಸಬಂಧಿಸಿದ ದರ ಪರಿಷ್ಕರಣ ಆದೇಶಗಳ ಸಂಪೂರ್ಣ ವಿವರಗಳನ್ನು ಆಯೋಗದ ಅಂತರ್ಜಾಲ ತಾಣ - [www.karunadu.karnataka.gov.in/kerc](http://www.karunadu.karnataka.gov.in/kerc) ರಲ್ಲಿ ಪ್ರಕಟಿಸಲಾಗಿದೆ.***

*******

# KARNATAKA ELECTRICITY REGULATORY COMMISSION

**No.16 C-1, Miller Tank Bed Area, Vasanthanagara, Bengaluru-560052**

## PRESS NOTE

## <u>REVISION OF ELECTRICITY TARIFF FOR FY2022-23</u>

**1.** The Karnataka Electricity Regulatory Commission (KERC) has approved the ARR of KPTCL / ESCOMs for FY23 to FY25 and revision of Transmission Tariff of KPTCL for FY23 to FY25 and Retail Supply Tariff applicable to the consumers of all the Electricity Supply Companies (ESCOMs), Hukeri Rural Electricity Co-operative Society, Mangalore Special Economic Zone (MSEZ) (Mangaluru) and AEQUS SEZ (Belagavi District) in the State of Karnataka, for the Financial Year 2022 - 23.

**Considering the proposals of ESCOMs, Commission has approved revenue deficit of Rs.2159.00 Crores of ESCOMs for FY23, and approved increase in energy charges by 5 paise per unit and increase in fixed charges ranging between Rs.10 to 30 per HP / KWh / KVA to the consumers for recovery of gap of Rs.2159 Crores. The overall average increase accounts for 35 paise per unit for FY23 (increase by 4.33%). The ESCOMs had sought an average increase of 185 paise per unit accounting for 23.83% increase, for the proposed revenue deficit of Rs.11,320 Crores.**

**The revised tariff is applicable from 01.04.2022.**
The tariff for Financial Year 2022-23 approved by the Commission is annexed herein.

**2. Reasons for Increase in Tariff:**

a. The Revision of tariff for FY23 is necessitated to recover a revenue deficit of Rs.2159.48 Crores which includes Rs. 1700.49 Crores deficit of FY21.

b. Deficit of FY21:

- After the truing up of income and expenditure for FY21 with reference to audited accounts, the total deficit of all the ESCOMs is Rs.3143.16 Crores.

After deducting the amount of Regulatory Asset of Rs.1442.67 Crores of FY21 allowed for recovery during FY22 and FY23, the net gap for FY21 is Rs.1700.49 Crores to be carried forward to ARR of FY23.

- The Tariff Order for FY21 was issued on 4.11.2020 due to Covid-19 Pandemic and other reasons. The revised tariff was given effect from 1.11.2020 to avoid the burden of tariff increase to the consumers by creating Regulatory Asset of Rs.1442.70 Crores.

- Due to Covid-19 Pandemic, the sale of energy by ESCOMs in FY21 has drastically come down by 7228.65MU resulting in reduction in Revenue by Rs.6182.84 Crores than the approved figure. The power purchase cost in FY21 has also increased by 31 paise per unit due to payment of fixed charges without drawing energy from thermal stations.

- This deficit for FY21 alone accounts for increase in tariff by 27 paise per unit.

- The remaining increase (8 Paise per unit) is towards overall increase in the input costs towards power purchase, Operation & Maintenance, Depreciation and borrowing costs etc, for FY23.

**In order to enable the ESCOMs to carry on their business of supplying the electricity, which is the basic need of the Society, the increase in the tariff has become inevitable.**

**3. ESCOMs' Proposal:**

The ESCOMs have sought a tariff hike ranging between 132 paise to 236 paise per unit, in respect of all categories of consumers as follows:

| ESCOM | Per Unit Increase - Paise | Percentage Increase(%) |
|---|---|---|
| BESCOM | 158 | 19.68 |
| MESCOM | 132 | 17.60 |
| CESC | 227 | 30.45 |
| HESCOM | 217 | 29.33 |
| GESCOM | 236 | 30.52 |
| **Total** | **185** | **23.83** |

## 4. Uniform Tariff increase

Since a uniform tariff is in vogue in the State, the Commission has approved uniform increase across all the ESCOMs & Hukeri RECS and a marginal differential increase in BESCOM area. The increase in the energy charges is 5 paise per unit and increase in fixed cost is ranging between Rs.10 to Rs.30 per KW/ KVA except Battery Charging/Swapping Station for Electric Vehicles where the existing tariff is continued.

## 5. Highlights of the new Tariff Order:

- **Rebate to micro & Small Industries:**
  To enable the micro and small scale industries (as certified by the GOK) to recover from the adverse effects of Covid-19, the Commission has decided to allow a rebate of 50 paise per unit in the monthly energy consumption for one year;

- **Concessions to seasonal industries- Ice Manufacturing units / Cold Storage Plants**:
  In respect of Ice Manufacturing units / Cold Storage Plants used for fisheries purpose, situated in the coastal belt of Karnataka State within the radius of 5 Kms from Sea only, the demand charges shall be on the maximum demand recorded during the month or 85% of the contract demand whichever is higher at 50% of the normal demand charges plus energy charges at approved rates for the energy consumed. **In addition to this, a rebate of Re.1 per unit is allowed in the energy charges during the year.**

- **Continuation of relaxation in evening peak ToD during Monsoon months:**
  The relaxation of evening peak ToD tariff for use of power between 18.00 Hours to 22.00 hours during monsoon months of July to November is continued. However, the ToD tariff for use of power between 18.00 Hours to 22.00 hours during non-monsoon months of December to June will continue.

- **Discounted Energy Rate Scheme:**
  To encourage sale of surplus energy during the year, the Commission has continued the "Discounted Energy Rate Scheme" at Rs.6 per unit for the HT2(a)

(b) and (c) categories for usage of power over and above the base consumption for FY23.

- **Special Incentive Scheme for HT Consumers:**
  Special Incentive Scheme introduced in Tariff Order 2018, has been continued for FY23, at the existing terms and conditions, for all the HT Consumers for usage of energy during 10.00 Hrs. to 18.00 Hrs. by allowing an incentive of Re.1 per unit, for consumption over and above their base consumption. Further, the consumption during the night i.e., 22.00 Hrs to 6.00 Hrs an incentive of Rs.2 per unit being allowed for all the units consumed. Penal charges of One Rupee per unit would be levied for the energy consumed during the evening peak hours between 18.00 Hrs to 22.00 Hrs of non-monsoon months of FY23.
- **In order to encourage the use of EV's, the existing tariff for Battery Charging / Swapping Stations has been continued without any increase for FY23**.

- **Green Tariff:**
  The Commission continues to promote purchase and use of energy from Renewable Sources, Green Tariff at 50 paise per unit over and above the applicable Tariff for HT Industries & HT Commercial Consumers at their option to promote purchase of renewable energy from ESCOMs is continued.

**6. Government Subsidy:**

The estimated amount of subsidy to be paid to the ESCOMs and the Hukeri RECS by the Government towards free supply of electricity to 33.15 lakhs IP sets up to and inclusive of 10 HP is Rs.13019 Crores for FY23 as against Rs.12267.58 Crores for FY22. Subsidy for 26.39 lakh Bhagya Jyothi / Kutira Jyothi installations is Rs.618.04 Crores for FY23 as against Rs.567.13 Crores for FY22.

**7. Annual Revenue Requirement (ARR) of ESCOMs for FY23-25:**

The Commission, in accordance with the principles under the Multi-Year Tariff (MYT) Regulations has determined the revised Annual Revenue Requirement (ARR) for FY23-25. The Commission has also taken up the Annual Performance Review (APR) of all the Licensees for FY21 and the deficit thereon has been factored in the ARR for FY23.

The Summary of the Approved ARR, Sales and Power Purchase, in respect of all the ESCOMs, for the FY23 is as detailed in the following table:

| Sl No | Particulars | FY23 | FY24 | FY25 |
|---|---|---|---|---|
| 1 | Approved ARR of ESCOMs by KERC Rs. Crores | 52,023.43 | 51,919.59 | 54,453.76 |
| 2 | Power purchase in MU at Generation Bus | 71645.87 | 73,740.45 | 75,961.32 |
| 3 | Approved Transmission loss % | 2.864 | 2.764 | 2.664 |
| 4 | Approved Distribution loss in % (ESCOMs) | 10.84 | 10.48 | 10.10 |
| 5 | Total T & D loss in % | 13.88 | 13.43 | 12.98 |
| 6 | Approved sales in MU (ESCOMs) excluding T & D Losses | 61,699.38 | 63,877.27 | 66,098.99 |

**8. ESCOM-wise Proposed and Approved ARR for FY23-25:**

**[Figures in Rs. Crores]**

| ESCOM | FY23 | | FY24 | | FY25 | |
|---|---|---|---|---|---|---|
| | As proposed | As Approved | As Proposed | As Approved | As Proposed | As Approved |
| BESCOM | 28,027.81 | 25,574.78 | 26,959.45 | 25,786.12 | 28,179.43 | 27,042.72 |
| MESCOM | 4,799.93 | 4,378.05 | 4,528.31 | 4,165.08 | 4,768.29 | 4,361.30 |
| CESC | 6,612.81 | 5,603.94 | 6,068.37 | 5,559.83 | 6,472.06 | 5,826.87 |
| HESC OM | 11,601.56 | 10,040.21 | 10,113.80 | 9,950.05 | 10,709.15 | 10,439.90 |
| GESCOM | 7,771.08 | 6,426.46 | 6,647.19 | 6,458.52 | 6,872.51 | 6,782.993 |
| **Total** | **58,813.19** | **52,023.44** | **54,317.12** | **51,919.50** | **57,001.44** | **54,453.78** |

**9. Transmission Tariff for KPTCL for FY23-25:**

The Commission has determined ARR of Rs. 5093.77 Crores, Rs. 5415.75 Crores and Rs. 5803.79 Crores for KPTCL for FY23 to FY25 respectively. The approved Transmission Charges payable by ESCOMs for the Control period is as under:

| Year | Capacity Allocation in MW | Transmission Charges in Rs. per MW/Month | Transmission charges in Rs. Crores per annum |
|---|---|---|---|
| FY23 | 25,053 | 1,69,433 | 5,093.77 |
| FY24 | 26,103 | 1,72,897 | 5,415.74 |
| FY25 | 27,203 | 1,77,793 | 5,803.79 |

**10. Determination of ARR for FY23-25 and Revision of Retail supply tariff for FY23 for Hukeri Rural Electric Co-Op. Society, HERCS:**

The Commission has determined ARR of Rs.173.60 Crores, Rs.186.32 Crores and Rs.193.24 Crores for FY23 to FY25.

## 11. Determination of ARR for FY23-FY25 and revision of Retail supply tariff for Mangalore SEZ Ltd., (MSEZL) for FY23:

The Commission has determined ARR of Rs. 54.18 Crores for MSEZL for FY23. The Commission also approved the ARR of Rs.54.38 Crores and Rs.56.05 Crores for FY24 and FY25 respectively. The approved Retail Supply Tariff of MSEZL for FY23 is as under:

| Category | Demand Charges | Energy Charges |
|---|---|---|
| HT Industrial | Rs. 220 /KVA/ month | Rs.7.00/ kWh |
| HT Construction / Temporary | Rs. 260 /KVA/ month | Rs.11.00/ kWh |
| LT Industrial | Rs. 200/ KW/ Month | Rs.6.50/ kWh |
| LT Construction / temporary | Rs. 250 / KW/ Month | Rs.11.00/ kWh |

## 12. Determination of ARR for FY23-25 and Retail supply tariff for AEQUS SEZ for FY23:

The Commission has determined ARR of Rs. 20.43 Crores for AEQUS SEZ FY23. The Commission also approved the ARR of Rs.20.78 Crores for FY24 and Rs.23.13 Crores for FY25. The approved Retail Supply Tariff of AEQUS SEZ for FY23 is as under:

| Category | Demand Charges | Energy Charges |
|---|---|---|
| HT Industrial / Common facilities | Rs. 240 /KVA/ month | Rs.7.10/ kWh |
| HT Construction /Temporary | Rs. 275 /KVA/ month | Rs.11.00/ kWh |
| LT Common facilities | Rs. 240/ KW/ Month | Rs.7.20/ kWh |

***Note: The detailed category-wise revised tariff schedule is enclosed.***

***The Tariff Orders of KPTCL, ESCOMs, HRECS, MSEZL & AEQUS SEZ are made available on the Commission's website https://karunadu.karnataka.gov.in/kerc.***

********